# GENERAL KANNADA PAPER II
# FIRST DIVISION ASSISTANT

**Examination held on 09-06-2019** **Total marks: 100**

**(2:00PM TO 3:30PM)** **Subject Code: 367** **One mark for each question**

## KEY CHART

**Question Booklet Series - 'B'**

| Question Number | Key Answer | Question Number | Key Answer | Question Number | Key Answer | Question Number | Key Answer |
|---|---|---|---|---|---|---|---|
| 1 | *2* | 26 | *2* | 51 | *4* | 76 | *2* |
| 2 | *3* | 27 | *2* | 52 | *1* | 77 | *1* |
| 3 | *2* | 28 | *2* | 53 | *3* | 78 | *3* |
| 4 | *4* | 29 | *4* | 54 | *3* | 79 | *2* |
| 5 | *1* | 30 | *4* | 55 | *1* | 80 | *1* |
| 6 | *3* | 31 | *4* | 56 | *3* | 81 | *2* |
| 7 | *3* | 32 | *3* | 57 | *1* | 82 | *4* |
| 8 | *2* | 33 | *1* | 58 | *3* | 83 | *2* |
| 9 | *4* | 34 | *4* | 59 | *4* | 84 | *4* |
| 10 | *2* | 35 | *4* | 60 | *3* | 85 | *2* |
| 11 | *1* | 36 | *1* | 61 | *4* | 86 | *4* |
| 12 | *3* | 37 | *4* | 62 | *2* | 87 | *2* |
| 13 | *4* | 38 | *4* | 63 | *4* | 88 | *2* |
| 14 | *2* | 39 | *2* | 64 | *1* | 89 | *1* |
| 15 | *3* | 40 | *3* | 65 | *4* | 90 | *4* |
| 16 | *1* | 41 | *3* | 66 | *1* | 91 | *2* |
| 17 | *4* | 42 | *2* | 67 | *4* | 92 | *3* |
| 18 | *3* | 43 | *2* | 68 | *1* | 93 | *2* |
| 19 | *4* | 44 | *4* | 69 | *2* | 94 | *1* |
| 20 | *3* | 45 | *3* | 70 | *1* | 95 | *2* |
| 21 | *1* | 46 | *2* | 71 | *4* | 96 | *4* |
| 22 | *1* | 47 | *1* | 72 | *4* | 97 | *2* |
| 23 | *1* | 48 | *2* | 73 | *2* | 98 | *2* |
| 24 | *1* | 49 | *3* | 74 | *1* | 99 | *4* |
| 25 | *2* | 50 | *3* | 75 | *3* | 100 | *2* |

www.shikarat.com

For More Information Contact Us

Website:- www.shikarat.com
WhatsApp:- 9742928829
Email:- Admin@gmail.com

1577486

ಈ ಪ್ರಶ್ನೆ ಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : **367**) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : **368**) ಎಂಬ ಎರಡು ವಿಷಯದ ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆರಿಸಿ ಮತ್ತು ಉತ್ತರಿಸಬೇಕು. ಅಭ್ಯರ್ಥಿಯು ತಾನು ಆಯ್ಕೆ ಮಾಡಿಕೊಂಡು ಉತ್ತರಿಸುವ ವಿಷಯದ ಮುಂದಿನ ವೃತ್ತವನ್ನು ಸ್ಪಷ್ಟವಾಗಿ ಒ.ಎಂ.ಆರ್. ಉತ್ತರ ಹಾಳೆಯಲ್ಲಿರುವ ನಿಗದಿತ ಸ್ಥಳದಲ್ಲಿ ಎನ್‌ಕೋಡ್ ಮಾಡತಕ್ಕದ್ದು. **ವಿಷಯ ಸಂಕೇತವನ್ನು ಎನ್‌ಕೋಡ್ ಮಾಡದಿದ್ದಲಿ OMR ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**2019**

**ಪ್ರಶ್ನೆ ಪತ್ರಿಕೆ ಶ್ರೇಣಿ**

# B

FDA

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಕನ್ನಡ (ಪತ್ರಿಕೆ II)

**ಸಮಯ : $1\frac{1}{2}$ ಗಂಟೆಗಳು** | **ವಿಷಯ ಸಂಕೇತ : 367** | **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆ ಪತ್ರಿಕೆಯೊಂದಿಗೆ ಬದಲಾಯಿಸಿ ಕೊಳ್ಳತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯ ಶ್ರೇಣಿಯು, ತಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆ ಪತ್ರಿಕೆಯಾದ ಮತ್ತು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆ ಪತ್ರಿಕೆಯನ್ನೇ ಪಡೆಯತಕ್ಕದ್ದು.**
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| | | | | | | |

4. **ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :*** *English version of the instructions is printed on the back cover of this booklet.*

www.shikarat.com

SEAL

***ಸೂಚನೆಗಳು :*** *ಕೆಳಗಿನ ಪದಗಳಿಗೆ (ಪ್ರಶ್ನೆ ಸಂಖ್ಯೆ 1 – 9) ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪವನ್ನು ಗುರ್ತಿಸಿ.*

ಉದಾಹರಣೆ: ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ "ಹೊಳೆಯುವ" ಎಂಬುದು "ಮೀನ್"ನ ಅರ್ಥವನ್ನು ಹೇಳುವ ಪದ ಆದುದರಿಂದ (1) ನ್ನು ಗುರುತಿಸಬೇಕು.

1. ತಸ್ಕರ ಎಂದರೆ

(1) ಭಾಸ್ಕರ

(2) ಕಳ್ಳ

(3) ದಿವಾಕರ

(4) ತಕಲಿ

2. ಹಳು ಎಂದರೆ

(1) ಅಳು

(2) ರೋದಿಸು

(3) ಕಾಡು

(4) ಆಲಾಪ

3. ಕೋಮಣ, ಇದರ ಸಮಾನಾರ್ಥಕ ಪದಗಳು

(1) ತೋರಣ, ಕಲ್ಯಾಣ

(2) ಲಂಗೋಟಿ, ಕೌಪೀನ

(3) ಕೌಪೀನ, ತೋರಣ

(4) ಕಲ್ಯಾಣ, ಲಂಗೋಟಿ

4. ದೂರ್ವೆ ಇದರ ಸಮಾನಾರ್ಥಕ ಪದ

(1) ಹರಟೆ

(2) ಭಯ

(3) ಹಸು

(4) ಗರಿಕೆ

5. ದ್ವಿರದ ಎಂದರೆ

(1) ಆನೆ

(2) ಕರಡಿ

(3) ನರಿ

(4) ಜಿಂಕೆ

6. ಪಂಜ ಎಂದರೆ

(1) ಪಂಜು

(2) ಪಂಚೆ

(3) ಹುಲಿಯ ಅಂಗಾಲು

(4) ಪಂದ್ಯ

7. ಪಲ್ಲಲ ಎಂದರೆ

(1) ಪಲ್ಲವ

(2) ಪಲ್ಲಟ

(3) ಕೊಳ

(4) ಮೇಲಿನ ಯಾವುದೂ ಅಲ್ಲ



www.shikarat.com

8. ಗೋಸಾಯಿ ಇದರ ಸಮಾನಾರ್ಥಕ ಪದ

(1) ಗೋಶಾಲೆ

(2) ಸನ್ಯಾಸಿ

(3) ಗೋರಕ್ಷಕ

(4) ಸೇವಕಿ

9. ಪಾಷಾಣ ಎಂಬುದರ ಸಮಾನಾರ್ಥ

(1) ಹಗ್ಗ

(2) ಪಾಯಸ

(3) ಹರಿಶಿಣ

(4) ಕಲ್ಲು

*__ಸೂಚನೆಗಳು :__ ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ 10 – 17) ವಿರುದ್ಧಾರ್ಥಕ ಪದಗಳನ್ನು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಿಂದ ಗುರ್ತಿಸಿ.*

ಉದಾಹರಣೆ : ತೆಂಕಣ

(1) ಮೂಡಣ

(2) ಬಡಗಣ

(3) ಪಡುವಣ

(4) ತೆಗಣ

ಇಲ್ಲಿ "ತೆಂಕಣ" ಪದಕ್ಕೆ ವಿರುದ್ಧಾರ್ಥಕ ರೂಪ "ಬಡಗಣ" ಎಂಬುದು (2) ನ್ನು ಗುರುತಿಸಬಹುದು.

10. ಸುವಿಖ್ಯಾತಿ

(1) ಸುಪ್ರಸಿದ್ಧ

(2) ಕುವಿಖ್ಯಾತಿ

(3) ಅಪ್ರಸಿದ್ಧ

(4) ಪ್ರಸಿದ್ಧ

11. ಆಸ್ತಿಕ

(1) ನಾಸ್ತಿಕ

(2) ನಾಸಿಕ

(3) ಧಾರ್ಮಿಕ

(4) ಸಿರಿವಂತ

12. ಜಾತ

(1) ವಿಜಾತ

(2) ಹುಟ್ಟು

(3) ಅಜಾತ

(4) ಸಾವು

13. ಮತ್ಸರ

(1) ಹೊಟ್ಟೆಕಿಚ್ಚು

(2) ಅಮತ್ಸರ

(3) ದುರ್ಮತ್ಸರ

(4) ನಿರ್ಮತ್ಸರ

www.shikarat.com

14. ಸಂಧ್ಯಾಕಾಲ

(1) ಮಧ್ಯಾಹ್ನ

(2) ಪ್ರಾತಃಕಾಲ

(3) ರಾತ್ರಿಕಾಲ

(4) ಒಳ್ಳೆಯ ಕಾಲ

15. ಕೃತಜ್ಞ

(1) ಅಕೃತಜ್ಞ

(2) ಸರ್ವಜ್ಞ

(3) ಕೃತಘ್ನ

(4) ಉಪಕಾರಿ

16. ದುರ್ಬಲ

(1) ಸಬಲ

(2) ಅಬಲ

(3) ಬಲ

(4) ನಿರ್ಬಲ

17. ಮಾನವ

(1) ನರ

(2) ಅಮಾನವ

(3) ಕ್ರೂರಿ

(4) ದಾನವ

***ಸೂಚನೆಗಳು :*** *ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು (ಪ್ರಶ್ನೆ ಸಂಖ್ಯೆ 18 – 22) ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ.*

ಉದಾಹರಣೆ : "ಬೆಣ್ಣೆ ಹಚ್ಚು"

(1) ರೊಟ್ಟಿಗೆ ಬೆಣ್ಣೆ ಹಚ್ಚು

(2) ಮೈಯುಜ್ಜುವುದು

(3) ಹೊಗಳುವುದು

(4) ಸೇವೆ ಮಾಡುವುದು

ಇಲ್ಲಿ "ಹೊಗಳುವುದು" ಸರಿಯಾದ ಅರ್ಥ ಆದುದರಿಂದ (3) ನ್ನು ಗುರುತಿಸಬೇಕು.

18. 'ಗಾಳಿಗೆ ತೂರು'

(1) ರಾಶಿ ಮಾಡು

(2) ಕೈ ಬಿಡು

(3) ತಿರಸ್ಕರಿಸು

(4) ಹೊರಹಾಕು

www.shikarat.com

19. 'ಕೆಂಡಕಾರು'

(1) ಮೋಸ ಮಾಡು

(2) ಹೊಟ್ಟೆಕಿಚ್ಚು ಪಡು

(3) ಬೆಂಕಿಗೆ ಹಾಕು

(4) ಸಿಟ್ಟಾಗು

20. ಮೂಗು ದಾರ ತೊಡಿಸು

(1) ವಿರೂಪಗೊಳಿಸು

(2) ಮುದ್ದುಮಾಡು

(3) ಹತೋಟಿಯಲ್ಲಿ ಇಡು

(4) ಮತ್ತೊಬ್ಬರ ರಕ್ಷಣೆಯಲ್ಲಿರು

21. "ಐತಿ ಎಂದರೆ ಪ್ರೇತಿಯನ್ನು" ನುಡಿಗಟ್ಟಿನ ಅರ್ಥ

(1) ಹೇಳಿದ್ದಕ್ಕೆ ವಿರುದ್ದವಾಗಿ ಹೇಳು

(2) ಕೈಬಿಡು

(3) ನೆಪ ಮಾತ್ರಕ್ಕೆ ಊಟ ಮಾಡು

(4) ಪ್ರಸಿದ್ಧವಾಗಿರುವ

22. ಸೆರಗಿನಲ್ಲಿ ಗಂಟು ಹಾಕಿಕೊಳ್ಳು - ನುಡಿಗಟ್ಟಿನ ಅರ್ಥ

(1) ಜ್ಞಾಪಕದಲ್ಲಿಟ್ಟುಕೊಳ್ಳು

(2) ಪ್ರೀತಿಯಿಂದ ಇರು

(3) ಯಜಮಾನಿಕೆ ನಡೆಸು

(4) ಸ್ವಾವಲಂಬಿಯಾಗುವಂತೆ

***ಸೂಚನೆಗಳು** : ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 23 - 27) ಗೆರೆ ಎಳೆದ ಭಾಗದಲ್ಲಿ ಕೊಡಲಾದ ಇಂಗ್ಲೀಷ್ ರೂಪಕ್ಕೆ ಪರ್ಯಾಯವಾಗಿ ನಾಲ್ಕು ಕನ್ನಡ ರೂಪಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ.*

ಉದಾಹರಣೆ : ಹೆದ್ದಾರಿಯಲ್ಲಿ ಕಾರೊಂದು **ಆಕ್ಸಿಡೆಂಟ್** ಗೊಳಗಾಯಿತು.

(1) ಪ್ರಮಾದ

(2) ಅಪಘಾತ

(3) ವಿಪತ್ತು

(4) ಆಕಸ್ಮಾತ್

ಇಲ್ಲಿ "ಅಪಘಾತ" ಎಂಬುದು ಸೂಕ್ತ ರೂಪವಾದುದರಿಂದ (2) ನ್ನು ಗುರುತಿಸಬೇಕು.

23. ಇತ್ತೀಚೆಗೆ **ಸೋಷಿಯಲ್ ಮೀಡಿಯಾಗಳು** ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಲಿವೆ.

(1) ಸಾಮಾಜಿಕ ಮಾಧ್ಯಮಗಳು

(2) ಸಮಾಜ ಸೇವಾ ಸಂಸ್ಥೆಗಳು

(3) ಸಾಮಾಜಿಕ ಪತ್ರಿಕೆಗಳು

(4) ಸಾಮಾಜಿಕ ಸಂಘಟನೆಗಳು



www.shikarat.com

24. ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಗೆ ಆಗಮಿಸಿದ ಅತಿಥಿಗಳು ತುಂಬ **'ಆಥೆಂಟಿಕ್'** ಆಗಿ ಮಾತನಾಡಿದರು.

(1) ಅಧಿಕೃತವಾಗಿ

(2) ಸರಳವಾಗಿ

(3) ಸುಲಲಿತವಾಗಿ

(4) ಚೆನ್ನಾಗಿ

25. ಮುಖ್ಯಮಂತ್ರಿಗಳು ಬರಗಾಲ ಕಾಮಗಾರಿಯನ್ನು ಕುರಿತು **ಸೆಕ್ರೆಟರಿಯೆಟ್ ಸ್ಟಾಫ್** ನ್ನು ಉದ್ದೇಶಿಸಿ ಮಾತನಾಡಿದರು.

(1) ರಹಸ್ಯ ಕಾರ್ಯದರ್ಶಿ ಸಿಬ್ಬಂದಿ

(2) ಸಚಿವಾಲಯದ ಸಿಬ್ಬಂದಿ

(3) ಆಪ್ತ ಸಿಬ್ಬಂದಿ

(4) ಕಾರ್ಯಕ್ರಮ ಕಾರ್ಯದರ್ಶಿ ಸಿಬ್ಬಂದಿ

26. ಹೊಸದಾದ ಕನ್ನಡ ಚಿತ್ರದ ರಿವ್ಯೂ ನೋಡಿದೆ ಚೆನ್ನಾಗಿದೆ.

(1) ಅನಿಸಿಕೆ

(2) ವಿಮರ್ಶೆ

(3) ಟೀಕೆ

(4) ಹೊರನೋಟ

27. ವಿಷಯ ತಜ್ಞರ ಸಮಿತಿ ಸೇರಿ **ಟೆಕ್ಸ್ಟ್ ಬುಕ್** ಸಿದ್ಧಪಡಿಸಿದೆ.

(1) ಪರೀಕ್ಷಾ ಪುಸ್ತಕ

(2) ಪಠ್ಯ ಪುಸ್ತಕ

(3) ಪರಿಚಯ ಪುಸ್ತಕ

(4) ಪಠ್ಯ ಕ್ರಮ

***ಸೂಚನೆಗಳು:*** *ಈ ಕೆಳಗೆ ಕೊಟ್ಟ ಶಬ್ದಗಳಲ್ಲಿ (ಪ್ರಶ್ನೆ ಸಂಖ್ಯೆ 28 – 32) ಒಂದು ಪದ ಉಳಿದವುಗಳ ಗುಂಪಿಗೆ ಸೇರುವುದಿಲ್ಲ. ಅಂತಹ ಪದ ಗುರುತಿಸಿ.*

ಉದಾಹರಣೆ :

(1) ಹುಡುಗಿ

(2) ನವಿಲು

(3) ಗಿಳಿ

(4) ಕಿತ್ತಳೆ

ಇಲ್ಲಿ "ಕಿತ್ತಳೆ" ಇತರ ಪದಗಳ ಜಾತಿಗೆ ಸೇರುವುದಿಲ್ಲ ಆದುದರಿಂದ (4) ನ್ನು ಗುರುತಿಸಬೇಕು.

28. (1) ಸೂರ್ಯ

(2) ಶಶಿ

(3) ಇನ

(4) ಭಾಸ್ಕರ

29. (1) ಶ್ರೀರಾಮಾಯಣ ದರ್ಶನಂ

(2) ಮೂಕಜ್ಜಿಯ ಕನಸುಗಳು

(3) ಭಾರತ ಸಿಂಧುರಶ್ಮಿ

(4) ಕವಿರಾಜಮಾರ್ಗ



www.shikarat.com

30. (1) ಗೊಟ್ಟಿ

(2) ಸನ್ನೆ

(3) ಬೇಸಿಗೆ

(4) ಕುಠಾರ

31. (1) ನಾನು

(2) ನೀನು

(3) ಅವನು

(4) ಯಾರು

32. (1) ಕಿಲಕಿಲ

(2) ಜುಳುಜುಳು

(3) ಅಬ್ಬಬ್ಬಾ

(4) ರಪರಪ

***ಸೂಚನೆಗಳು:*** *ಕೆಳಗಿನ ವಾಕ್ಯಗಳಲ್ಲಿ ಗೆರೆ ಹಾಕಿ ಸೂಚಿಸಿದ ಭಾಗ ತಪ್ಪಾಗಿದ್ದರೆ ಮುಂದೆ ಕೊಡಲಾದ ಮೂರು ಪರ್ಯಾಯ ರೂಪಗಳಲ್ಲಿ ಸರಿಯಾದ ರೂಪವನ್ನು ಗುರುತಿಸಿ. ತಪ್ಪಿಲ್ಲದಿದ್ದರೆ "ಸುಧಾರಣೆ ಬೇಕಿಲ್ಲ" ಎಂಬ (4) ನ್ನು ಗುರುತಿಸಿ (ಪ್ರಶ್ನೆ ಸಂಖ್ಯೆ **33 – 38**).*

ಉದಾಹರಣೆ : ಲೋಕಾಯುಕ್ತ ಲಂಚ **ಹಗುರಣಕ್ಕೆ** ಸಂಬಂಧಿಸಿ ಎಂಟು ಜನರ ಬಂಧನ

(1) ಹಾಗರಣ

(2) ಹಗರಣ

(3) ಹಗರನ

(4) ತಪ್ಪಿಲ್ಲ

ಇಲ್ಲಿ ಗೆರೆ ಎಳೆದ "ಹಗುರಣ" ತಪ್ಪಾಗಿದ್ದು ಅದರ ಸರಿಯಾದ ರೂಪವು "ಹಗರಣ" ಎಂದಾಗಿದೆ ಆದರಿಂದ **(2)** ನ್ನು ಗುರುತಿಸಬೇಕು.

33. ನವೆಂಬರ್ ಒಂದರಂದು ಕರ್ನಾಟಕ **ರಾಜೋಸ್ತವ** ಕಾರ್ಯಕ್ರಮ ನಡೆಯುತ್ತದೆ.

(1) ರಾಜ್ಯೋತ್ಸವ

(2) ರಾಜೋತ್ಸವ

(3) ರಾಜ್ಯೋಸ್ತವ

(4) ತಪ್ಪಿಲ್ಲ

34. ಶ್ರೀಯವರಿಗೆ ಗ್ರೀಕ್ <u>ದುರಂತ</u> ನಾಟಕಗಳ ಛಾಯೆ ಎದ್ದು ಕಂಡಿದೆ.

(1) ದುರಂಥ

(2) ದುರಂತಾ

(3) ಧುರಂತ

(4) ತಪ್ಪಿಲ್ಲ

35. ಬಾದಾಮಿ ಚಾಲುಕ್ಯರ <u>ಏಳಿಗೆ</u>ಯಿಂದ ಕರ್ನಾಟಕ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸ್ವರೂಪ ಬಂದಿದೆ.

(1) ಏಳೀಗೆ

(2) ಹೇಳಿಗೆ

(3) ಹೆಳಿಗೆ

(4) ತಪ್ಪಿಲ್ಲ

36. <u>ವಿಧ್ಯಾರ್ಥಿ ಸಂಘದ</u> ಚುನಾವಣೆಯನ್ನು ನಡೆಸಲು ನಿರ್ಧರಿಸಲಾಗಿದೆ.

(1) ವಿದ್ಯಾರ್ಥಿ ಸಂಘ

(2) ವಿದ್ಯರ್ಥಿ ಸಂಘ

(3) ವಿದ್ಯಾರ್ತಿ ಸಂಘ

(4) ತಪ್ಪಿಲ್ಲ

37. ಪ್ರಜೆಗಳಿಂದ ಪ್ರಜೆಗಳಿಗಾಗಿ ನಡೆಸುವಂತಹ ಆಡಳಿತ <u>ಪ್ರಜಾಪ್ರಭುತ್ವ</u>.

(1) ಪ್ರಜೆಪ್ರಭುತ್ವ

(2) ಪ್ರಜಪ್ರಭುತ್ವ

(3) ಪ್ರಜಾಪ್ರಬತ್ವ

(4) ತಪ್ಪಿಲ್ಲ

38. ಬುದ್ಧನ <u>ಅನುಯಾಯಿಗಳು</u> ಬೌದ್ಧ ಧರ್ಮವನ್ನು ಪ್ರಸಾರ ಮಾಡಿದರು.

(1) ಅನುಯಾಹಿಗಳು

(2) ಅನುಹಾಯಿಗಳು

(3) ಅನುವಾಯಿಗಳು

(4) ತಪ್ಪಿಲ್ಲ

***<u>ಸೂಚನೆಗಳು:</u>*** ಖಾಲಿ ಬಿಟ್ಟಿರುವ ಜಾಗಕ್ಕೆ ಸರಿಯಾದ ಉತ್ತರ ಗುರುತಿಸಿ ಅಥವಾ ಪ್ರಶ್ನೆಗೆ ಸರಿಯಾದ ಉತ್ತರ ಆಯ್ಕೆ ಮಾಡಿ. *(ಪ್ರಶ್ನೆ ಸಂಖ್ಯೆ 39 – 65)*

ಉದಾಹರಣೆ : ನಡೆಯುತ್ತಿದೆ ಎಂಬುದು _____ ದ ಪದ.

(1) ಭೂತಕಾಲ

(2) ವರ್ತಮಾನ ಕಾಲ

(3) ಭವಿಷ್ಯತ್ ಕಾಲ

(4) ಹಿಂದಿನ ಕಾಲ

ಇಲ್ಲಿ "ವರ್ತಮಾನ ಕಾಲ" ಎಂಬುದು ಸರಿಯಾದ ಉತ್ತರ ಆದುದರಿಂದ (2) ನ್ನು ಗುರುತಿಸಬೇಕು.

www.shikarat.com

39. 'ಜ್' ಈ ಅಕ್ಷರದ ಉತ್ಪತ್ತಿ ಸ್ಥಾನ ಇದಾಗಿದೆ.

(1) ಕಂಠ್ಯ

(2) ತಾಲವ್ಯ

(3) ಮೂರ್ಧನ್ಯ

(4) ಅನುನಾಸಿಕ

40. 'ರಾಷ್ಟ್ರ' ಈ ಪದದಲ್ಲಿ ಯಾವ ಜಾತಿಯ ಸಂಯುಕ್ತಾಕ್ಷರಗಳಿವೆ ?

(1) ಪರಜಾತೀಯ

(2) ಸಜಾತೀಯ

(3) ವಿಜಾತೀಯ

(4) ಸ್ವಜಾತೀಯ

41. ದೇವರು ಒಳ್ಳೆಯದನ್ನು ಮಾಡಲಿ ಎನ್ನುವದು _____ ವಾಕ್ಯ.

(1) ಸಂಭಾವನಾರ್ಥಕ

(2) ಕ್ರಿಯಾರ್ಥಕ

(3) ವಿಧ್ಯರ್ಥಕ

(4) ನಿಷೇದಾರ್ಥಕ

42. 'ಕನ್ನಡಿಗ' ಎಂಬುದು _______ ದ ಉದಾಹರಣೆ.

(1) ಕೃದಂತಾವ್ಯಯ

(2) ತದ್ಧಿತನಾಮ

(3) ಭಾವಕೃದಂತ

(4) ಭೂತಕೃದಂತ

43. ವಾಚಿಸು ಎಂದರೆ __________.

(1) ಮಾತನಾಡು

(2) ಓದು

(3) ಅಧ್ಯಯನ ಮಾಡು

(4) ಪಿಸುಗುಟ್ಟು

44. 'ಪಂಡಿತ' ಎಂಬುದು ಈ ಕೆಳಗಿನ ಯಾವ ನಾಮಪದಕ್ಕೆ ಉದಾಹರಣೆಯಾಗಿದೆ ?

(1) ರೂಢನಾಮ

(2) ಅಂಕಿತನಾಮ

(3) ಸರ್ವನಾಮ

(4) ಅನ್ವರ್ಥಕನಾಮ

45. ಹಣದಾಸೆಗೆ ಎಂಬುದು ಯಾವ ಸಂಧಿ ?

(1) ಸವರ್ಣದೀರ್ಘ ಸಂಧಿ

(2) ಆದೇಶ ಸಂಧಿ

(3) ಲೋಪ ಸಂಧಿ

(4) ಜಸ್ತ್ವ ಸಂಧಿ

46. ಸಜ್ಜನ ಎಂಬುದು ಯಾವ ಲಿಂಗ ?

(1) ನಪುಂಸಕ ಲಿಂಗ

(2) ಪುಲ್ಲಿಂಗ

(3) ನಿತ್ಯ ನಪುಂಸಕ ಲಿಂಗ

(4) ಸಾಮಾನ್ಯ ಲಿಂಗ

www.shikarat.com

47. ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದ ಪಂಡಿತರು ಯಾರು ?

(1) ಒಂದನೇಯ ನಾಗವರ್ಮ

(2) ಎರಡನೇ ನಾಗವರ್ಮ

(3) ಕೇಶಿರಾಜ

(4) ಒಂದನೇ ಗುಣವರ್ಮ

48. ಪ್ರಶ್ನಾರ್ಥಕ ಮತ್ತು ಆತ್ಮಾರ್ಥಕ ಸರ್ವನಾಮಗಳು ಯಾವು ?

(1) ತಾನ್, ಯಾ

(2) ಯಾ, ತಾನ್

(3) ಆನ್ ಏನ್

(4) ಏನ್ ಆನ್

49. ಕನ್ನಡದ ಯಾವ ಶಬ್ದಗಳಲ್ಲಿ ಪ್ರತ್ಯಯಗಳು ಲಿಂಗ ವಿವಕ್ಷೆ ಮಾಡುತ್ತವೆ ?

(1) ಮಹತ್

(2) ಆ ಮಹತ್

(3) ಮೇಲಿನ ಎರಡು

(4) ಯಾವುದು ಅಲ್ಲ

50. ಬಾಳುವವನಿಗೆ ಒಂದು ಮಾತು

(1) ಮಡಿಕೆಗೆ ಒಂದು ಹೊಡೆತ

(2) ದೊಣ್ಣೆಗೆ ಒಂದು ನಿಮಿಷ

(3) ಬಾಳೆ ಗಿಡಕ್ಕೆ ಒಂದು ಗೊನೆ

(4) ಯಾವುದು ಅಲ್ಲ

51. ದೇಶ್ಯ ಪದವನ್ನು ಗುರುತಿಸಿ

(1) ನಕಲಿ

(2) ಕಾಗದ

(3) ಮಹತ್

(4) ನೇಸರ

52. ಕೂಸು ಮಲಗಿತು ಎಂಬುದು ________ .

(1) ಅಕರ್ಮಕ ಕ್ರಿಯಾಪದ

(2) ಸಕರ್ಮಕ ಕ್ರಿಯಾಪದ

(3) ಕಾಲಸೂಚಕ ಪ್ರತ್ಯಯ

(4) ಆಖ್ಯಾತ ಪ್ರತ್ಯಯ

53. ತಾರನು ಎನ್ನುವುದು ________ .

(1) ವರ್ತಮಾನ ಕಾಲದ ಕ್ರಿಯಾಪದ

(2) ಸಂಭಾವಾರ್ಥಕ ಕ್ರಿಯಾಪದ

(3) ನಿಷೇಧಾರ್ಥಕ ಕ್ರಿಯಾಪದ

(4) ಭವಿಷ್ಯತ್ ಕಾಲದ ಕ್ರಿಯಾಪದ



www.shikarat.com

54. ಕರ್ಮಣಿ ಪ್ರಯೋಗದಲ್ಲಿ ಕರ್ತೃ ಪದವು ಪಡೆದುಕೊಳ್ಳುವ ವಿಭಕ್ತಿ ಪ್ರತ್ಯಯ

(1) ಪ್ರಥಮಾ

(2) ದ್ವಿತೀಯಾ

(3) ತೃತೀಯಾ

(4) ಸಪ್ತಮೀ

55. ಕೊಳಕು ಪದದ ವಿರುದ್ಧ ರೂಪ

(1) ಸ್ವಚ್ಛ

(2) ಕ್ಲೀನು

(3) ಮಡಿ

(4) ಶುದ್ಧ

56. ನೀಲಗಾರರು ಈ ಪರಂಪರೆಗೆ ಸೇರಿದವರು

(1) ಜಾನಪದ

(2) ಶರಣ ಪರಂಪರೆ

(3) ಮಂಟೇಸ್ವಾಮಿ

(4) ಯಕ್ಷಗಾನ

57. ಕೆರೆಗೆ ಹಾರ – ಇದು

(1) ಜನಪದ ಕಥನಗೀತೆ

(2) ಜನಪದ ಗೀತೆ

(3) ಜನಪದ ಮಹಾಕಾವ್ಯ

(4) ಜನಪದ

58. ಪಡೆದೀಯೈದು ಪದವನ್ನು ಬಿಡಿಸಿದಾಗ

(1) ಪಡೆದು + ಈಯೈದು

(2) ಪಡೆದೀ + ಐದು

(3) ಪಡೆದು + ಈ + ಐದು

(4) ಪಡೆದು + ಇ + ಐದು

59. 'ಭಾಷಾ ವಿಜ್ಞಾನದ ಮೂಲ ತತ್ವಗಳು' ಕೃತಿಯನ್ನು ರಚಿಸಿದವರು _________ .

(1) ಕುಶಾಲಪ್ಪ ಗೌಡ

(2) ರಾಜೇಶ್ವರಿ. ಎಂ

(3) ಡಾ. ಸೌದತ್ತಿ ಮಠ

(4) ಚಿದಾನಂದ ಮೂರ್ತಿ

60. 'ಹೊಸಅಂಗಿ' – ಈ ಸಂಧಿಯ ಉದಾಹರಣೆ

(1) ಆಗಮ

(2) ಲೋಪ

(3) ಪ್ರಕೃತಿಭಾವ

(4) ಆದೇಶ

61. 'ಬಸವ' – ಈ ಪದದ ತತ್ಸಮ

(1) ಋಷಭ

(2) ಋಷಭಾ

(3) ವಸವ

(4) ವೃಷಭ

www.shikarat.com

62. ಅರಿಸಮಾಸ ಪದ

(1) ರಣಶೂರ

(2) ಮಂಗಳಾರತಿ

(3) ಹೊಸಗನ್ನಡ

(4) ಮೂಲೋಕ

63. _____ ಎಂಬುದು ಭಾವಸೂಚಕಾವ್ಯಯ.

(1) ಭಲಿ

(2) ಬಾಲ

(3) ಭಾಳು

(4) ಭಲಾ

64. ಸುಲಿದ ಬಾಳೆ ಹಣ್ಣಿನಂದದಿ ಕನ್ನಡ ನುಡಿ ಎಂಬುದು _________.

(1) ಉಪಮಾ ಅಲಂಕಾರ

(2) ರೂಪಕ ಅಲಂಕಾರ

(3) ದೀಪಕ ಅಲಂಕಾರ

(4) ಉತ್ಪ್ರೇಕ್ಷಾಲಂಕಾರ

65. ಸ್ವತಂತ್ರವಾಗಿ ಉಚ್ಚಾರವಾಗದ ಅಕ್ಷರಗಳನ್ನು ಹೀಗೆ ಕರೆಯುತ್ತಾರೆ

(1) ಯೋಗವಾಹ

(2) ಪ್ಲುತ

(3) ಸ್ವರ

(4) ವ್ಯಂಜನ

***ಸೂಚನೆಗಳು :*** *ಕೆಳಗಿನ ಪ್ರಶ್ನೆಗಳಲ್ಲಿ (ಪ್ರಶ್ನೆ ಸಂಖ್ಯೆ **66 – 69**) ಕನ್ನಡ ಮೂಲದ್ದು ಅಲ್ಲದ (ಅನ್ಯಭಾಷೆಯಿಂದ ಸ್ವೀಕೃತವಾದ) ಶಬ್ದವನ್ನು ಗುರುತಿಸಿ.*

ಉದಾಹರಣೆ :

(1) ದಾರಿ

(2) ಹಾದಿ

(3) ರಸ್ತೆ

(4) ಕಾಡು

ಈ ನಾಲ್ಕು ಪದಗಳಲ್ಲಿ "ರಸ್ತೆ" ಮಾತ್ರ ಅನ್ಯಭಾಷೆಯಿಂದ ಸ್ವೀಕೃತವಾದ ಪದವಾಗಿದೆ ಆದುದರಿಂದ ಇಲ್ಲಿ (3) ನ್ನು ಗುರುತಿಸಬೇಕು.

66. (1) ದಿವಾನ

(2) ಅರಸು

(3) ಆಳು

(4) ಅಂಬಿಗ

67. (1) ಜೀವನ

(2) ಹಾಲು

(3) ಗದ್ದೆ

(4) ಗುಲಾಮ

68. (1) ಇನಾಮು

(2) ಬಹುಮಾನ

(3) ಉಡುಗೆ

(4) ಗಮನ

69. (1) ಮನೆ

(2) ಜವಾನ

(3) ಮೋಡ

(4) ಸಾಹಸ



www.shikarat.com

**ಸೂಚನೆಗಳು :** ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ **70 – 72)** ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಲ್ಲಿ ಸೂಕ್ತವಾದುದನ್ನು ಗುರ್ತಿಸಿ. ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ, ಆಗ (4) ನ್ನು ಗುರುತಿಸಿ.

ಉದಾಹರಣೆ : ಮಕ್ಕಳು ಸಂಗೀತವನ್ನು ಸುಶ್ರಾವ್ಯವಾಗಿ **ಆಡಿದರು**.

(1) ಹಾಡಿದರು

(2) ಆಲಿಸಿದರು

(3) ಮಾಡಿಸಿದರು

(4) ಸುಧಾರಣೆ ಬೇಕಿಲ್ಲ

ಇಲ್ಲಿ "ಆಡಿದರು" ಎಂಬುದು ದೋಷವಾಗಿದ್ದು "ಹಾಡಿದರು" ಎಂದಿರಬೇಕು ಆದುದರಿಂದ (1) ನ್ನು ಗುರುತಿಸಬೇಕು.

**70.** ರಸ್ತೆಯ ದುರಸ್ತಿ ಕಾರ್ಯದಿಂದ ಸಂಚಾರಕ್ಕೆ **ಅನಾನುಕೂಲ**ವಾಗಿದೆ.

(1) ಅನನುಕೂಲ

(2) ಅನಾನೂಕುಲ

(3) ಅನಾನೂಕೂಲ

(4) ಸುಧಾರಣೆ ಬೇಕಿಲ್ಲ

**71.** **ಗಂಧೋದಕ**ದ ಸ್ನಾನ ಮಾಡುವುದು ಒಳ್ಳೆಯದು

(1) ಗಂದೊಧಕ

(2) ಘಂದೊದಕ

(3) ಘಂಧೋದಕ

(4) ಸುಧಾರಣೆ ಬೇಕಿಲ್ಲ

**72.** **ಚುನಾವಣೆ**ಯ ಸಭೆಯಲ್ಲಿ ಬಹಳ ಜನ ಸೇರಿದ್ದರು.

(1) ಚುಣಾವಣೆ

(2) ಛುನಾವಣೆ

(3) ಚುಣಾವನೆ

(4) ಸುಧಾರಣೆ ಬೇಕಿಲ್ಲ

**ಸೂಚನೆಗಳು:** ಕೆಳಗಿನವುಗಳಲ್ಲಿ (ಪ್ರಶ್ನೆ ಸಂಖ್ಯೆ **73 – 77)** ಗೆರೆಹಾಕಿದ ಭಾಗಗಳು ತಪ್ಪಾಗಿವೆ. ಅವುಗಳ ಮುಂದೆ ಕೊಟ್ಟ ನಾಲ್ಕು ಪರ್ಯಾಯ ರೂಪಗಳಿಂದ ಸರಿಯಾದ ಉತ್ತರವನ್ನು ಗುರುತಿಸಿ.

ಉದಾಹರಣೆ : ಕುವೆಂಪು **ಚೋಮನದುಡಿ** ಎಂಬ ಕಾದಂಬರಿಯನ್ನು ರಚಿಸಿದ್ದಾರೆ.

(1) ಬೆಟ್ಟದ ಜೀವ

(2) ಕಾನೂರ ಹೆಗ್ಗಡತಿ

(3) ಚಿಕ್ಕವೀರ ರಾಜೇಂದ್ರ

(4) ದುರ್ಗಾಸ್ತಮಾನ

ಇಲ್ಲಿ "ಕಾನೂರ ಹೆಗ್ಗಡತಿ" ಸರಿಯಾದ ಉತ್ತರ ಆದುದರಿಂದ (2) ನ್ನು ಗುರುತಿಸಬೇಕು.

**73.** **ಕನಕದಾಸರ** ಪೂರ್ವಾಶ್ರಮದ ಹೆಸರು ಶ್ರೀನಿವಾಸ ನಾಯಕ

(1) ಶ್ರೀಪಾದರು

(2) ಪುರಂದರ ದಾಸ

(3) ಗೋಪಾಲದಾಸ

(4) ವಿಜಯದಾಸ

**74.** ಜೈಮಿನಿ ಭಾರತವು **ಭಾಮಿನಿ** ಷಟ್ಪದಿಯಲ್ಲಿದೆ.

(1) ವಾರ್ಧಕ ಷಟ್ಪದಿ

(2) ಕುಸುಮ ಷಟ್ಪದಿ

(3) ಪರಿವರ್ಧಿನಿ ಷಟ್ಪದಿ

(4) ಶರ ಷಟ್ಪದಿ



www.shikarat.com

75. ಕಾವೇರಿಯಿಂದ ಗೋದಾವರಿವರೆಗೆ ಹಬ್ಬಿದ ನಾಡು ಕನ್ನಡ ನಾಡು ಎಂಬುದಾಗಿ ಹರಿಶ್ಚಂದ್ರ ಕಾವ್ಯದಲ್ಲಿ ಹೇಳಲಾಗಿದೆ.

(1) ವಿಕ್ರಮಾರ್ಜುನ ವಿಜಯ

(2) ಸಾರ್ವ ಭೀಮ ವಿಜಯ

(3) ಕವಿರಾಜ ಮಾರ್ಗ

(4) ವಡ್ಡಾರಾಧನೆ

76. ನಂಜುಂಡಕವಿ ಮಿತ್ರಾವಿಂದಗೋವಿಂದ ನಾಟಕ ಬರೆದಿದ್ದಾನೆ.

(1) ತಿರುಮಲಾರ್ಯ

(2) ಸಿಂಗರಾರ್ಯ

(3) ಸಿಂಗಿರಾಜ

(4) ಚಾಮರಸ

77. ನಯಸೇನನು 'ಕರ್ಣಾಟಕ ಕಾದಂಬರಿ' ಕೃತಿಯನ್ನು ಬರೆದನು

(1) ಒಂದನೇ ನಾಗವರ್ಮ

(2) ನಾಗವರ್ಮಾಚಾರ್ಯ

(3) ಎರಡನೇ ನಾಗವರ್ಮ

(4) ನಾಗಚಂದ್ರ

**ಸೂಚನೆಗಳು:** ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 78 – 82) ಪದಗಳು ಕ್ರಮಬದ್ಧವಾಗಿಲ್ಲ. ಅವು ಅರ್ಥಪೂರ್ಣವಾಗುವಂತೆ ಗೆರೆಹಾಕಿ ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ. ಅವುಗಳ ಅನುಕ್ರಮವನ್ನು ಗುರುತಿಸಿ.

ಉದಾಹರಣೆ :

ವಿದ್ಯಾರ್ಥಿಗಳು (P) ಜಾಸ್ತಿಯಾಗಿದೆ (Q)

ಆಕರ್ಷಿತರಾಗುತ್ತಿರುವುದು (R)

ದುರಭ್ಯಾಸಗಳ ಕಡೆಗೆ (S)

(1) P S R Q

(2) Q R S P

(3) S Q R P

(4) Q S R P

ಇಲ್ಲಿ P S R Q ಎಂಬುದು ಸರಿಯಾದ ಜೋಡಣೆಯ ಕ್ರಮ ಆದುದರಿಂದ ಇಲ್ಲಿ (1) ನ್ನು ಗುರುತಿಸಬೇಕು.

www.shikarat.com

78. ಕರುಳಿಲ್ಲದ (P) ತಲೆಯಾತಂಗೆ (Q) ತಲೆಯಿಲ್ಲದ (R) ಒಡಲು ನೋಡಾ (S)

(1) PQRS
(2) SQRP
(3) RQPS
(4) RPQS

79. ಪ್ರಶ್ನೆ (P) ವಿಜ್ಞಾನದ (Q) ಕೇಳುವುದು (R) ಅಡಿಪಾಯವೇ (S)

(1) QRSP
(2) QSPR
(3) RSPQ
(4) PRQS

80. ಮರಸೊಬಗು (P) ಹೊಸಚಿಗುರು (Q) ಹಳೆಬೇರು (R) ಕೂಡಿರಲು (S)

(1) RQSP
(2) QRPS
(3) SPQR
(4) SPRQ

81. ದೈಹಿಕ ವ್ಯಾಯಾಮ ಮಾಡುವುದು (P) ಶರೀರಕ್ಕೆ (Q) ಪ್ರತಿದಿನವೂ (R) ತುಂಬಾ ಒಳ್ಳೆಯದು (S)

(1) QRSP
(2) RPQS
(3) PRQS
(4) QRPS

82. ವರ್ಗಕ್ಕೆ (P) ದ್ರಾವಿಡ ಭಾಷಾ (Q) ಸೇರಿದೆ (R) ಕನ್ನಡ ಭಾಷೆಯು (S)

(1) RSPQ
(2) PRSQ
(3) SRQP
(4) SQPR

www.shikarat.com

83. ಎಸ್.ಎಲ್. ಭೈರಪ್ಪರವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿಸಿಕೊಟ್ಟ ಕೃತಿ

(1) ಮಂದ್ರ

(2) ದಾಟು

(3) ಪರ್ವ

(4) ವಂಶವೃಕ್ಷ

84. 'ಇಗೋ ಕನ್ನಡ' ಎಂಬ ಹೆಸರಿನ ಅಂಕಣ ಬರೆಯುತ್ತಿದ್ದವರು

(1) ಪಾ.ವೆಂ. ಆಚಾರ್ಯ

(2) ಅಮೃತ ಸೋಮೇಶ್ವರ

(3) ಕೆ.ವಿ. ನಾರಾಯಣ

(4) ಜಿ. ವೆಂಕಟಸುಬ್ಬಯ್ಯ

85. ಪಟ್ಟಿ I ಮತ್ತು ಪಟ್ಟಿ II ನ್ನು ಹೋಲಿಸಿ ಕೆಳಗೆ ನೀಡಿರುವ ಉತ್ತರಗಳ ಗುಂಪಿನಲ್ಲಿ ಸರಿಹೊಂದುವುದನ್ನು ಗುರುತಿಸಿ :

| ಪಟ್ಟಿ I | ಪಟ್ಟಿ II |
|---|---|
| A. ಹರಿಶ್ಚಂದ್ರ ಕಾವ್ಯ | I. ಸಾಂಗತ್ಯ |
| B. ಆದಿ ಪುರಾಣ | II. ಷಟ್ಪದಿ |
| C. ಭರತೇಶ ವೈಭವ | III. ಕಂದ |
| D. ಅಜಿತ ತೀರ್ಥಂಕರ ಪುರಾಣ | IV. ಚಂಪೂ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | III | IV | II |
| (2) | II | IV | I | III |
| (3) | II | I | III | IV |
| (4) | III | II | IV | I |

86. 'ಸಂಜೆಗಣ್ಣಿನ ಹಿನ್ನೋಟ' ಇದು ಯಾರ ಆತ್ಮ ಕಥನ ?

(1) ಎಂ. ಗೋಪಾಲ ಕೃಷ್ಣ ಅಡಿಗ

(2) ಎಚ್.ಎಲ್. ನಾಗೇಗೌಡ

(3) ರಾವ್ ಬಹಾದ್ದೂರ್

(4) ಎ.ಎನ್. ಮೂರ್ತಿರಾವ್

**ಸೂಚನೆಗಳು :** ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 87 – 92) (1) (2) (3) ಎಂಬ ಗೆರೆ ಎಳೆದ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರ್ತಿಸಿ. ದೋಷವಿಲ್ಲದಿದ್ದರೆ "ತಪ್ಪಿಲ್ಲ" ಎಂಬ ನಾಲ್ಕನೆ (4) ಭಾಗವನ್ನು ಗುರುತಿಸಿ.

ಉದಾಹರಣೆ : ವಿದ್ಯಾರ್ಥಿಗಳು (1) ಶಾಲೆಗೆ (2) ಮುಗಿಸಿಕೊಂಡು ಬಂದರು (3) ತಪ್ಪಿಲ್ಲ (4)

ಇಲ್ಲಿ ಭಾಗ (2) ರಲ್ಲಿ "ಶಾಲೆಯನ್ನು" ಎಂದಿರಬೇಕಾಗಿತ್ತು ಈ ಭಾಗದಲ್ಲಿ ದೋಷವಿರುವುದರಿಂದ ಇಲ್ಲಿ (2) ನ್ನು ಗುರುತಿಸಬೇಕು.

87. ರಾಘವಾಂಕನನ್ನು (1) ಶಟ್ಪದಿಯ ಬ್ರಹ್ಮ (2) ಎಂದು ಕರೆಯಲಾಗಿದೆ (3) ತಪ್ಪಿಲ್ಲ (4)

88. ನಾನು (1) ನಮ್ಮ ಗುರುಗಳಿಗೆ (2) ಹಲವು ವಿಚಾರಗಳನ್ನು ಕಲಿತೆನು (3) ತಪ್ಪಿಲ್ಲ (4)

89. ಮತಧಾನವು (1) ನಮ್ಮ ಪವಿತ್ರ (2) ಕರ್ತವ್ಯವಾಗಿದೆ (3) ತಪ್ಪಿಲ್ಲ (4)

www.shikaral.com

90. ದೇವರು (1) ಸಮಸ್ತಲೋಕಗಳನ್ನು (2)
ಪ್ರೀತಿಯಿಂದ ಕಾಪಾಡುವನು (3) ತಪ್ಪಿಲ್ಲ (4)

91. ನಮ್ಮ ಪರೀಕ್ಷೆ (1) ಮುಗಿಯಿತು (2)
ತಂದೆಗೆ ಮಗನು ತಿಳಿಸಿದನು (3) ತಪ್ಪಿಲ್ಲ (4)

92. ಬುದ್ಧಿವಂತನಾದ ಅವನು (1) ಪಾಠವನ್ನು (2)
ಚೆನ್ನಾಗಿ ಓದಿದರು (3) ತಪ್ಪಿಲ್ಲ (4)

93. ಕೆಳಗಿನವರಲ್ಲಿ ಪಂಪ ಪ್ರಶಸ್ತಿ ವಿಜೇತ ಕವಿ
(1) ಬಿ.ಎಂ. ಶ್ರೀ
(2) ತಿ.ನಂ. ಶ್ರೀ
(3) ದ.ರಾ. ಬೇಂದ್ರೆ
(4) ಅ.ನ. ಕೃ

94. "ನೀರೊಳಗಿರ್ದುಂ ಬೆಮರ್ತನುರಗೆ ಪತಾಕಂ" ಈ ಮಾತುಗಳು ಯಾವ ಕೃತಿಯಲ್ಲಿ ಬಂದಿವೆ ?
(1) ಗದಾಯುದ್ಧ
(2) ರಾಮಚಂದ್ರ ಚರಿತ ಪುರಾಣ
(3) ಕರ್ಣಾಟ ಭಾರತ ಕಥಾ ಮಂಜರಿ
(4) ಪಂಪ ಭಾರತ

95. ವೈದೇಹಿ ಇದು ಯಾರ ಕಾವ್ಯ ನಾಮ ?
(1) ತಿರುಮಲೆ ರಾಜಮ್ಮ
(2) ಜಾನಕಿ ಎಸ್. ಮೂರ್ತಿ
(3) ಬಿ.ಎನ್. ಸುಬ್ಬಮ್ಮ
(4) ವೆಂಕಟಲಕ್ಷ್ಮಿ

96. ಅಜಗಣ್ಣ ಇದು ಯಾರ ವಚನಗಳ ಅಂಕಿತ ?
(1) ಅಕ್ಕಮಹಾದೇವಿ
(2) ಗಂಗಾಂಬಿಕೆ
(3) ನೀಲಾಂಬಿಕೆ
(4) ಮುಕ್ತಾಯಕ್ಕ

***ಸೂಚನೆಗಳು*** *: ಈ ಕೆಳಗೆ (ಪ್ರಶ್ನೆ ಸಂಖ್ಯೆ 97 – 100) P Q R S ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.*

*ಉದಾಹರಣೆ :*

P. ಪುಲಿಗೆರೆ, ಕಿಸುವೊಳಲ್, ಕೊಪ್ಪಳ ಮತ್ತು ಒಕ್ಕುಂದ ಇವೇ ಆ ನಾಲ್ಕು ನಗರಗಳು.

Q. ಒಂಭತ್ತನೆಯ ಶತಮಾನದಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತು.

R. ಆ ನಾಡಿನಲ್ಲಿನ ನಾಲ್ಕು ನಗರಗಳ ಮಧ್ಯದ ಕನ್ನಡವೇ ಕನ್ನಡದ ತಿರುಳೆಂದು ಕವಿ ಹೇಳಿದ್ದಾನೆ.

S. ಆ ನಾಡಿನಲ್ಲಿ ವಾಸವಾಗಿದ್ದ ಜನತೆಯ ಉನ್ನತ ಸಂಸ್ಕೃತಿಯಿಂದಾಗಿ ಇಡೀ ವಿಶ್ವದಲ್ಲಿ ಕನ್ನಡ ನಾಡು ಒಂದು ವಿಶೇಷ ಸ್ಥಾನವನ್ನು ಪಡೆದಿತ್ತು.

(1) Q S R P
(2) S R Q P
(3) P Q R S
(4) R P Q S

ಇಲ್ಲಿ ಸರಿಯಾದ ಉತ್ತರ Q S R P ಆದುದರಿಂದ (1) ನ್ನು ಗುರುತಿಸಬೇಕು.

www.shikarat.com

97. ಭಾರತರತ್ನ ಅಂಬೇಡ್ಕರರ ಬದುಕಿನ ಒಂದು ಘಟನೆ

P. ದುಃಖದಿಂದ ಅಂಬೇಡ್ಕರ್ ಮನೆಗೆ ಬಂದರು

Q. ಬಾಲಕ ಅಂಬೇಡ್ಕರ ಕ್ಷೌರಿಕನ ಬಳಿಗೆ ಹೋದರು

R. ಅವರನ್ನು ಅಕ್ಕಂದಿರು ಸಮಾಧಾನ ಮಾಡಿ ಕೂದಲನ್ನು ತಾವೇ ಕತ್ತರಿಸಿದರು

S. ಕ್ಷೌರಿಕನು ಕ್ಷೌರ ಮಾಡಲು ನಿರಾಕರಿಸಿದ. ನಾಯಿ ನರಿಗಳನ್ನು ಮುಟ್ಟುವ ಜನರು ನನ್ನನ್ನೇಕೆ ಮುಟ್ಟುವುದಿಲ್ಲ ನಾನು ಅಷ್ಟೇ ಕೀಳೆ ? ಎಂದು ಚಿಂತಿಸಿದರು

(1) PRSQ
(2) QSPR
(3) QPRS
(4) RSQP

98. P. ಅವನತಿಯ ಅಂಚಿನಲ್ಲಿರುವವನು ಉನ್ನತಿಗೇರಬಲ್ಲ

Q. ಮಾನವತೆ ಮತ್ತು ದಾನವತೆಗಳೆರಡಕ್ಕೂ ಮನುಷ್ಯನ ಅಂತರ್ಯದಲ್ಲಿ ಜಾಗವಿದೆ

R. ಉನ್ನತಿಯ ಶಿಖರದಲ್ಲಿರುವವನು ಅವನತಿಯಂಚಿಗೆ ಸರಿದು ಬಿಡಬಲ್ಲ

S. ಅವನತಿ ಮತ್ತು ಉನ್ನತಿಗಳೆರಡೂ ವ್ಯಕ್ತಿಯ ನಡೆಯನ್ನೇ ಅವಲಂಬಿಸಿರುತ್ತವೆ.

(1) PQRS
(2) QSRP
(3) RSQP
(4) SRQP

99. P. 2500 ವರ್ಷಗಳ ಹಿಂದೆ ಸಂಸ್ಕೃತದಲ್ಲಿ ಬರೆದ 'ಮಹಾಕಾವ್ಯವೇ 'ಮಹಾಭಾರತ' ಇದರಲ್ಲಿ 18 ಪರ್ವಗಳಿವೆ

Q. ಈ ಗೀತೆ ಕೂಡಾ ಮಹಾಭಾರತದ 6 ನೇ ಪರ್ವದಲ್ಲಿದ್ದು ಇದರಲ್ಲಿಯೂ 18 ಅಧ್ಯಾಯಗಳಿರುತ್ತವೆ

R. ಕೃಷ್ಣಾರ್ಜುನರ ನಡುವೆ ನಡೆದ ಸಂಭಾಷಣೆ ಇದಾಗಿದ್ದು

S. ಇದನ್ನು ಹಿಂದೂಗಳ 'ಪವಿತ್ರ ಗ್ರಂಥ' ಎನ್ನುತ್ತಾರೆ ಪದಶಃ ಅರ್ಥ "ಭಗವಂತ ಹಾಡಿದ ಗೀತೆ" ಯೇ "ಭಗವದ್ಗೀತೆ" – ಯಾಗಿದೆ.

(1) RPSQ
(2) SRQP
(3) SPRQ
(4) PRSQ

100. ಗುರುವಿನ ಬಳಿ ಒಬ್ಬ ಕೇಳುತ್ತಾನೆ 'ಗುರುವೇ ದಾರಿಯಾವುದು....'

P. ನೀನು ದಾರಿಯ ಬಗ್ಗೆ ಯೋಚಿಸುತ್ತಿಲ್ಲ ನಿನ್ನ ಬಗ್ಗೆ ಚಿಂತಿಸುತ್ತಿದ್ದೆ ಅದಕ್ಕೆ

Q. ಹಾಗಿದ್ದಲ್ಲಿ ನನಗೇಕೆ ಅದು ಕಾಣಿಸುತ್ತಿಲ್ಲ?

R. ಅಯ್ಯಾ ಅದು ನಿನ್ನ ಕಣ್ಣ ಎದುರಲ್ಲೇ ಇದೆ ಎನ್ನುತ್ತಾನೆ ಗುರು

S. ಹಾಗಿದ್ದಲ್ಲಿ ಅದು ನಿಮಗೆ ಕಾಣಿಸುತ್ತದೋ ? ಎಲ್ಲಿಯವರೆಗೆ ನನಗೆ ಕಾಣಿಸುವುದಿಲ್ಲ ನಿನಗೆ ಕಾಣಿಸುತ್ತದೆ ಎಂಬಂತೆ ಯೋಚಿಸುತ್ತೀಯೋ ಅಲ್ಲಿಯವರೆಗೆ ನಿನ್ನ ಕಣ್ಣುಗಳಿಗೆ ಮಂಜು ಮುಸುಕಿರುತ್ತದೆ.

(1) PRQS
(2) RQPS
(3) QRSP
(4) RPSQ

www.shikarat.com